ಇದೊಂದು ಪುಟ್ಟ ಸಂತೋಷ ಕೂಟ. ಈ ಕೂಟಕ್ಕೆ ಪ್ರತ್ಯೇಕವಾದ ಯಾವ ಕಾರಣವೂ ಇಲ್ಲ. ಹೀಗೊಂದು ಕೂಟವನ್ನು ಏರ್ಪಡಿಸದೆ ಅದಾಗಲೇ ತಿಂಗಳು ಕಳೆದುಹೋಗಿದೆ. ನಮ್ಮಲ್ಲಿ ಅನೇಕರಿಗೆ ವಿರಹ ವೇದನೆ ಬರತೊಡಗಿ, 'ಪಾರ್ಟಿ ಯಾವಾಗ? ಪಾರ್ಟಿ ಯಾವಾಗ?' ಅಂತ ವಿಚಾರಿಸತೊಡಗಿದ್ದರು. ಅದಕ್ಕೆ ಸರಿಯಾಗಿಯೇ ದೆಹಲಿಯ ಕನ್ನಡಿಗರೊಬ್ಬರು– ಮಿಸ್ಟರ್ ನಟರಾಜ್ ಪಟ್ಟಣಶೆಟ್ಟಿ– ಇಲ್ಲಿಗೆ ಬಂದಿದ್ದಾರೆ. ಮಿಸ್ಟರ್ ನಟರಾಜ್, ಬನ್ನಿ ಇಲ್ಲಿ, ಇವರೇ, ಇವರು ಬರುವ ಸುದ್ದಿ ಕಳೆದ ವಾರಾನೇ ಬಂದಿತ್ತು. ಇವರು ಬಂದಾಗಲೇ ಪಾರ್ಟಿ ಕೂಡ ಆಗಿ ಬಿಡಲಿ ಅಂತ ಯೋಚಿಸಿಕೊಂಡಿದ್ದೆ. ಹಾಗೇ ಆಯ್ತು.

'ಕೆಲವರು ಬರೋದಕ್ಕೆ ಇನ್ನೂ ಬಾಕಿಯಿದ್ದರೂ ನಮ್ಮ ಕಾರ್ಯಕ್ರಮ ಪ್ರಾರಂಭಿಸೋಣ. ಉಳಿದವರು ಆಮೇಲೆ ಸೇರಿಕೊಳ್ತಾರೆ. ನಿಮಗೆಲ್ಲರಿಗೂ ಹಾರ್ದಿಕ ಸ್ವಾಗತ. ಪ್ರತ್ಯೇಕವಾಗಿ ಮಿಸ್ಟರ್ ನಟರಾಜ್ ಪಟ್ಟಣಶೆಟ್ಟಿ ಅವರಿಗೆ' ಎಂದರು. ನೆರೆದಿದ್ದವರೆಲ್ಲ ಚಪ್ಪಾಳೆ ತಟ್ಟಿ ಸಂತೋಷ ವ್ಯಕ್ತಪಡಿಸಿದರು. ಆ ಹೊತ್ತಿಗೆ ಗ್ಲಾಸುಗಳಲ್ಲಿ ವಿವಿಧ ಪಾನೀಯಗಳನ್ನು ತುಂಬಿ ಅವರವರ ಆಯ್ಕೆಗೆಂದು ಟ್ರೇಯನ್ನು ಮುಂದೊಡ್ಡುತ್ತಾ ಬೇರರ್‌ಗಳು ಬಂದರು. ಪ್ರೊ. ಭಾಸ್ಕರ್ ಒಂದು ಲಾರ್ಜ್ ವಿಸ್ಕಿ ತೆಗೆದುಕೊಂಡರು. ಜೊತೆಗೆ ಸುತ್ತಮುತ್ತ ಇದ್ದ ಗೆಳೆಯರು ಕುಳಿತಲ್ಲಿಯೇ ತಮ್ಮ ಆಯ್ಕೆಯನ್ನು ಕೈಗೆತ್ತಿಕೊಂಡರು. 'ಚಿಯರ್ಸ್' ಹೇಳುವುದಕ್ಕಿಂತ ಮುಂಚಿತವಾಗಿ ಗಣ್ಯವ್ಯಕ್ತಿಯೊಬ್ಬರು ವೇದಿಕೆಯೇರಿ ಪ್ಲಾಂಟರ್ ಸೋಮಣ್ಣನವರ ಗುಣಗಾನ ಮಾಡಿದರು. ಅತಿಥಿಗಳನ್ನು ಸತ್ಕರಿಸುವ ಸನ್ಮನಸ್ಸು ಸೋಮಣ್ಣನವರ ವಿಶಿಷ್ಟ ಗುಣವೆಂದರು. ಅವರು ಕಟ್ಟಿಸಿದ ಅತಿಥಿಗೃಹದ ಮಹತ್ವವನ್ನು ವಿವರಿಸಿದರು. ದೆಹಲಿಯಿಂದಲೂ ಸೋಮಣ್ಣನವರನ್ನು ಜನರು ಹುಡುಕಿ ಬರುವುದಕ್ಕೆ ಅವರ ಔದಾರ್ಯವೇ ಕಾರಣವೆಂದರು. ಅವೆಲ್ಲವೂ ಸೋಮಣ್ಣನವರಿಗೆ ಬಹಳ ಹಿಡಿಸುವ ಮಾತುಗಳಾಗಿದ್ದವು. ಹೊಗಳಿಕೆಯ ಮಾತುಗಳ ಮೂಲಕ ಸೋಮಣ್ಣನವರಿಂದ ಏನು ಕೆಲಸ ಬೇಕಾದರೂ ಮಾಡಿಸಬಹುದು ಎಂಬುದನ್ನು ಬಲ್ಲವರು ಬಲ್ಲರು.

ಪ್ಲಾಂಟರ್ ಸೋಮಣ್ಣನವರ ಆರೋಗ್ಯಕ್ಕಾಗಿ ಎಲ್ಲರೂ 'ಚಿಯರ್ಸ್' ಎಂದು ಹೇಳಿದರು. ತಕ್ಷಣ ಸಂಕೋಚ, ಸಂಭ್ರಮದೊಂದಿಗೆ ಎದ್ದು ನಿಂತ ಸೋಮಣ್ಣನವರು, 'ಅಲ್ಲಲ್ಲ. ಇವತ್ತಿನ ನಮ್ಮ ಅತಿಥಿ ನಟರಾಜ್ ಪಟ್ಟಣಶೆಟ್ಟರ ಆರೋಗ್ಯಕ್ಕೆ' ಎಂದರು. ಎಲ್ಲರೂ ಮತ್ತೊಮ್ಮೆ ಚಿಯರ್ಸ್ ಎನ್ನುತ್ತ ಗ್ಲಾಸಿನಿಂದ ಗಿಲ್ ಗಿಲ್ ಸದ್ದು ಹೊರಡಿಸಿದರು.

**11**

ಬೆಳಿಗ್ಗೆ ಮನೆ ಬಿಟ್ಟು ಹೋದ ದೀಪೂ ಕತ್ತಲಾದರೂ ಮನೆಗೆ ಬಂದಿರಲಿಲ್ಲ. ಬೆಳಿಗ್ಗೆ ನಡೆದ ಘಟನೆ ನಿಮಿತ್ತವಾಗಿ ಆತ ಮನೆ ಬಿಟ್ಟು ಹೋಗಿರಬಹುದೆ? ಡಾ. ಗಣೇಶರ ಮನೆಗೇನಾದರೂ ಹೋಗಿರಬಹುದೆ? ಇನ್ನೇನು ಮಾಡೋಣ ಎಂದು ಶೀಲಾ ತಲೆ ಕೆರೆದುಕೊಂಡಳು. ಹಲವು ಬಾರಿ ಗೇಟಿನ ಕಡೆಗೆ ನೋಡಿದಳು. ಬಹುದಿನಗಳಿಂದ ದೀಪೂ ಜೊತೆಗೇ ಇದ್ದು ರಾತ್ರಿಯ ತನಕ ಒಬ್ಬಳೇ ಇರುವ ಹವ್ಯಾಸ ತಪ್ಪಿಹೋಗಿತ್ತು. ಗಂಡನಿಗೆ ಫೋನ್ ಮಾಡಿದರೆ ಸುಮ್ಮನೇ ತೊಂದರೆ. ಪಾರ್ಟಿಯ ಮಧ್ಯೆ ಫೋನ್ ಮಾಡುವುದಾದರೂ ಹೇಗೆ? ಪಾರ್ಟಿಗೆ ಡಾ. ಗಣೇಶ್ ಹೋಗಿರಬಹುದೋ ಗೊತ್ತಿಲ್ಲ. ಒಂದು ವೇಳೆ ತಡವಾದೀತು. ಕ್ಲಿನಿಕ್ ಮುಚ್ಚಿ ಹೋಗಬೇಕಲ್ಲ. ಅವರಿಗೆ ಫೋನ್ ಮಾಡಿದರೆ ಆಗಬಹುದೆ? ಇಷ್ಟು ಹೊತ್ತಾದರೂ ಇವ ಯಾಕೆ ಬರಲಿಲ್ಲ? ಎಂದು ಶೀಲಾ ತಳಮಳಗೊಂಡಳು. ಆ ಕುರುಡುಗತ್ತಲೆಯಲ್ಲಿ ಯಾರೋ ಹೊರಗಡೆಯಿಂದ ನಡೆದಾಡಿದ ಹಾಗೆ ಶೀಲಾಳಿಗೆ ಅನ್ನಿಸಿತು. ದೀಪು ಬಂದಿರಬೇಕು. ಅಬ್ಬ! ಸಮಾಧಾನವಾಯಿತು! ಎಂದುಕೊಂಡು 'ದೀಪೂ' ಎಂದು ಕರೆದಳು. ಆತನ ಸದ್ದಿಲ್ಲ. ಮತ್ತೆ ಒಂದೆರಡು ಬಾರಿ ಕರೆದಳು. ಕಂಪನ ತಡೆಯಲಾರದೆ 'ಯಾರದು?' ಎಂದಳು. ಸದ್ದಿಲ್ಲ. ಚಿಕಮಗಳೂರು ಎಸ್ಟೇಟಿಗೆ ಮಧುಚಂದ್ರಕ್ಕೆ ಹೋಗಿದ್ದಾಗಲೂ ಹಾಗೇ ಆಗಿತ್ತು. ಇನ್ನೇನು ಮಾಡುವುದು? ಡಾ. ಗಣೇಶರ ಕ್ಲಿನಿಕ್‌ಗೆ ಫೋನ್ ಮಾಡಿದಳು.

'ಹಲೋ, ನಾನು ಶೀಲಾ'.

'ಏನು ಶೀಲಾ, ಏನು ಸಮಾಚಾರ?'

'ದೀಪೂ, ಸಾಮಾನು ತರಲಿಕ್ಕೇಂತ ಪೇಟೆಗೆ ಹೋದವ ಇನ್ನೂ ಬಂದಿಲ್ಲ. ನಿಮ್ಮಲ್ಲಿಗೇನಾದರೂ...?'

'ಸಂಜೆ ಕ್ಲಿನಿಕ್‌ಗೆ ಹೊರಡೋವರೆಗೂ ನಮ್ಮನೆಗೆ ಬಂದಿಲ್ಲ. ಎಲ್ಲಿ ಹೋಗಿರಬೋದು?'

'ಅದೇ ಗೊತ್ತಾಗ್ತಾ ಇಲ್ಲ. ಬೆಳಗ್ಗೆ ಸ್ವಲ್ಪ ಅಧಿಕಪ್ರಸಂಗ ಮಾಡಿದ. ಸಿಟ್ಟು ತಡೀದೆ ಒಂದೇಟು ಬಿಗಿದೆ'.

'ಯಾಕೆ? ಅಂಥದ್ದೇನು ಮಾಡಿದ?'

'ಅದು... ಏನಿಲ್ಲ'.

'ಏನಿಲ್ಲ ಅಂದ್ರೆ?' ಹೋಗ್ಲಿ ಬಿಡು, ನಾನು ಅವನನ್ನು ಗಮನಿಸ್ತಾ ಬಂದಿದ್ದೆ. ನನ್ನನ್ನು ಕಂಡ್ರೂ ಒಂಥರಾ ನೋಡ್ತಿದ್ದ. ಒಂದಲ್ಲ ಒಂದಿವ್ಸ ಅವನಿಂದ ಅಪಾಯ ಇದ್ದೇ ಇದೇಂತ ನಾನೂ ಲೆಕ್ಕ ಹಾಕಿದ್ದೆ. ಪ್ರೊಫೆಸರ್ ಎಲ್ಲಿ?'

'ಸೋಮಣ್ಣನವರ ಗೆಸ್ಟ್ ಹೌಸಲ್ಲಿ ಪಾರ್ಟಿಯಿದೆ. ಬರೋದು ಹೊತ್ತಾಗಬಹುದು ಅಂದಿದ್ರು'.

'ಹೋ! ಹೌದಲ್ವ. ನಾನಿನ್ನೂ ಹೊರಡಬೇಕಷ್ಟೆ. ಅಂದ್ರೆ, ನಿನಗೀಗ ಹೆದ್ರಿಕೆ ಆಗ್ತಿದೆ ಅನ್ನು'.

'ಅಯ್ಯೋ... ಹಾಗಲ್ಲ' ಇಬ್ಬರೂ ನಕ್ಕರು.

'ನಾನು ಬರ್ಲಾ, ಧೈರ್ಯಕ್ಕೆ?'

'ಬೇಡ, ಸುಮ್ನೆ ಫೋನ್ ಮಾಡಿದೆ ಅಷ್ಟೆ. ನೀವು ಪಾರ್ಟಿಗೆ ಹೋಗ್ತೀರಲ್ಲ. ದೀಪೂ ಏನಾದ್ರೂ ಆ ಕಡೆ ಬಂದ್ರೆ ತಕ್ಷಣ ಮನೆಗೆ ಕಳುಹಿಸಿ ಬಿಡಿ, ನಿಮ್ಮನೆಯಿಂದ ಮ್ಯಾಗಜೀನ್ಸ್ ತಗೊಂಬಾ ಅಂತಾನೂ ಹೇಳಿದ್ದೆ. ಇಷ್ಟೇನೆ'.

ಡಾ. ಗಣೇಶ್ ಏನೋ ಮಾತನಾಡಬೇಕೆಂದಿದ್ದಂತೆ ರಿಸೀವರ್ ಕೆಳಗಿರಿಸಿದ ಸದ್ದು ಕೇಳಿಸಿತು. ತಾನೂ ರಿಸೀವರನ್ನು ಕೆಳಗಿರಿಸಿ ಕ್ಷಣ ಹೊತ್ತು ಯೋಚಿಸಿ ಮತ್ತೆ ತಮ್ಮ ಕೆಲಸದಲ್ಲಿ ತೊಡಗಿದರು. ಶೀಲಾ ಇನ್ನೇನು ಮಾಡೋಣವೆಂದು ಯೋಚಿಸುತ್ತಿದ್ದಂತೆ ಮತ್ತೊಮ್ಮೆ ಯಾರೋ ಮನೆಯ ಹೊರಗಡೆಯಿಂದ ಹಾದಂತಾಯಿತು. ನಿಜವಾಗಿ ಮನೆಯ ಹಿಂದುಗಡೆಯಿಂದ ಯಾರಾದರೂ ನಡೆಯುತ್ತಿದ್ದಾರೆಯೆ? ಅಥವಾ ಭೀತಿ ಮುತ್ತಿಕೊಂಡಿರುವ ಮನಸ್ಸಿನ ಡೋಲಾಯಮಾನ ಸ್ಥಿತಿಯೆ? ಹೋಗಿ ಹೋಗಿ ಈ ಕರಿಮಾಯಿ ಗುಡ್ಡದ ಬುಡಕ್ಕೆ ಯಾಕಾದರೂ ಬಂದು ನೆಲೆಸಿದೆವೋ? ಶೀಲಾಳಿಗೆ ಒಂದೂ ಅರ್ಥವಾಗಲಿಲ್ಲ. ಬೇರೆ ದಾರಿಯಿಲ್ಲದೆ ತನ್ನ ಗಂಡನಿಗೇ ಫೋನ್ ಮಾಡಿದಳು.

***

ತುಸು ತಡವಾಗಿ ಬಂದ ಡಾ. ಗಣೇಶ್ ಪಾರ್ಟಿಯಲ್ಲಿ ಸೇರಿಕೊಂಡರು. ಓಪನ್ ಬಾರಿನಿಂದ ಒಂದು ಲಾರ್ಜ್ ವಿಸ್ಕಿ ತೆಗೆದುಕೊಂಡು ತಾನೂ ಬಂದು ಖಾಲಿ ಇದ್ದ ಕುರ್ಚಿಯಲ್ಲಿ ಕುಳಿತರು. ಎದುರುಗಡೆ ಕುಳಿತಿದ್ದ ಡಾ. ಚಂಗಪ್ಪನವರು 'ಯಾಕಿಷ್ಟು ತಡ?' ಎಂದು ವಿಚಾರಿಸಿದರು.

'ಕ್ಲಿನಿಕ್ ಮುಚ್ಚಿ ಬರಬೇಕಲ್ಲ. ಕೊನೇ ಕ್ಷಣಕ್ಕೆ ಒಬ್ಬ ಪೇಷೆಂಟ್ ಬಂದ. ಬಿಟ್ಟು ಬರೋಕ್ಕಾಗ್ಲಿಲ್ಲ' ಎಂದರು ಡಾ. ಗಣೇಶ್.

'ಭಾನುವಾರಾನೂ ರೆಸ್ಟಿಲ್ವೆ ನಿಮಗೆ?' ಪಕ್ಕದವ್ರು ವಿಚಾರಿಸಿದ್ರು.

'ಡಾಕ್ಟರಿಗೆಲ್ಲಿಯ ಭಾನುವಾರ?' ಎನ್ನುತ್ತಿರಬೇಕಿದ್ದರೆ ಎಲ್ಲರೂ ನಕ್ಕರು. ಇತರ ಗೆಳೆಯರೊಂದಿಗೆ ಹರಟುವುದರ ಮಧ್ಯೆ ಸುತ್ತಲೂ ನೋಡಿ, 'ಪ್ರೊಫೆಸರ್ ಎಲ್ಲಿ?' ಎಂದರು.

'ಪಕ್ಕದ ಟೇಬಲಲ್ಲೇ ಕುಳಿತಿದ್ದರಲ್ಲಾ. ಅವರ ಗ್ಲಾಸ್ ನೋಡಿ, ಅಲ್ಲೇ ಇದೆ. ಬಹುಶಃ ವಾಶ್‌ರೂಂಗೆ ಹೋಗಿರಬಹುದು. ಅಥವಾ ಯಾರ ಜೊತೆಗಾದರೂ ಕಾಫಿ ಗಿಡದಲ್ಲಿ ಬೀಜ ಬಿಡುವ ಬಗ್ಗೆ ಕೊರೆಯುತ್ತಿರಬಹುದು'. ಲಘುವಾಗಿ ಒಬ್ಬಾತ ನುಡಿದದ್ದು ಎಲ್ಲರ ನಗೆಗೆ ಕಾರಣವಾಯಿತು. ಎಲ್ಲರೂ ಪರಸ್ಪರ ಮಾತಿನಲ್ಲಿ ಮಗ್ನರಾಗಿದ್ದರು. ದೂರದಲ್ಲಿ ಯಾರ ಜೊತೆಗೋ ಮಾತನಾಡುತ್ತ ನಿಂತಿದ್ದ ಪ್ರೊ. ಭಾಸ್ಕರ್ ಚಾರ್‌ಮಿನಾರ್ ಸೇದುತ್ತ ಬಂದು ಪಕ್ಕದಲ್ಲಿದ್ದ ಮೇಜಿನಿಂದ ತಮ್ಮ ಗ್ಲಾಸನ್ನೆತ್ತಿಕೊಂಡು ಪಕ್ಕದಲ್ಲಿದ್ದ ಆ್ಯಷ್‌ಟ್ರೇಯಲ್ಲಿ ಕೈಯಲ್ಲಿದ್ದ ಸಿಗರೇಟನ್ನು ಹೊಸಕಿಬಿಟ್ಟರು. ಅದನ್ನು ಗಮನಿಸಿದ ಡಾ. ಗಣೇಶ್, 'ಹಲೋ ಪ್ರೊಫೆಸರ್, ಆಗ್ಲೇ ಬಂದಿರಾ?' ಎಂದರು.

ಯಾವುದೋ ಗುಂಗಿನಲ್ಲಿದ್ದ ಪ್ರೊ. ಭಾಸ್ಕರ್ ಗ್ಲಾಸ್ ತೋರಿಸುತ್ತಾ, 'ಇಷ್ಟು ಹೊತ್ತಾಯಿತು' ಎಂದರು. ಮೇಜಿಡೀ ನಕ್ಕಿತು. ಅಂದು ಪ್ರೊ. ಭಾಸ್ಕರ್ ಸ್ವಲ್ಪ ಹೆಚ್ಚಾಗಿಯೇ ಕುಡಿದರು. ಡಾ. ಗಣೇಶ್ ಪ್ರೊಫೆಸರ ಹತ್ತಿರ ಕುಳಿತು ಏನನ್ನೋ ಪಿಸುಗುಡುತ್ತಿದ್ದರು. ಪ್ರೊಫೆಸರು ಹೆಚ್ಚು ಕುಡಿಯುತ್ತಿದ್ದಾಗ ಒಂದೆರಡು ಬಾರಿ ಡಾ. ಗಣೇಶ್ ಸೂಚನೆ ನೀಡಿದರೂ ಲಕ್ಷ್ಯ ಮಾಡದೆ 'ಬೇರರ್ ಒಂದು ಲಾರ್ಜ್, ಬೇರರ್ ಒಂದು ಲಾರ್ಜ್' ಎನ್ನುತ್ತಲೇ ಇದ್ದರು.

(ಸಶೇಷ)